

ಮನುಷ್ಯನಿಗೆ ಅನ್ನ ಕೊಟ್ಟರೆ ಆ ಹೊತ್ತಿಗೆ ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಾನೆ. ಟ್ವಿಟ್ಟರ್ ಕೊಟ್ಟರೆ ತಿನ್ನುವುದನ್ನು ಮರೆತು ಹಸಿವಿನಿಂದ ಸಾಯುತ್ತಾನೆ.



## ಗ್ಯಾಜೆಟ್ ಲೋಕ

ಯು.ಬಿ. ಪವನಜ
gadgetloka@gmail.com

ಪ್ರಪಂಚದ ಮೊತ್ತಮೊದಲ ಮೊಬೈಲ್ ಫೋನ್ ತಯಾರಿಸಿದ ಕಂಪೆನಿಯಿಂದ ಇನ್ನೊಂದು ಅತಿ ಕಡಿಮೆ ಬೆಲೆಯ ಶುದ್ಧ ಆಂಡ್ರಾಯಿಡ್ ಫೋನ್.

### ಮೋಟೊರೋಲ ಮೋಟೊ-ಇ

# ಕಿಸೆಗೆ ಖುಷಿ ಕೊಡುವ ಆಂಡ್ರಾಯಿಡ್ ಫೋನ್

ಫೆಬ್ರುವರಿ ತಿಂಗಳಿನಲ್ಲಿ ಮೋಟೊರೋಲ ಮೋಟೊ-ಜಿ ಫೋನ್ ಬಿಡುಗಡೆ ಮಾಡಿದಾಗ ಅದು ತುಂಬ ಸುದ್ದಿ ಮಾಡಿತ್ತು. ಮಧ್ಯಮ ಬೆಲೆಯಲ್ಲಿ ದುಬಾರಿ ಫೋನ್‌ಗಳು ನೀಡುವ ಬಹುತೇಕ ಗುಣವೈಶಿಷ್ಟ್ಯಗಳನ್ನು ನೀಡುವ ಫೋನ್ ಅದಾಗಿತ್ತು. ಸಹಜವಾಗಿಯೇ ಅದು ಬಿಸಿ ದೋಸೆಯಂತೆ ಮಾರಾಟವಾಗಿತ್ತು. ಫ್ಲಿಪ್‌ಕಾರ್ಟ್ ಜಾಲತಾಣದ ಮೂಲಕ ಮಾತ್ರ ಮಾರಾಟವಾಗುತ್ತಿದ್ದ ಅದು ಘೋಷಣೆಯಾದ ಎರಡು ಗಂಟೆಗಳಲ್ಲೇ ಅದರ ಪ್ರಥಮ ದಾಸ್ತಾನು ಮುಗಿದಿತ್ತು. ಈಗ ಅದೇ ಕಂಪೆನಿಯಿಂದ ಇನ್ನೂ ಕಡಿಮೆ ಬೆಲೆಗೆ ಒಂದು ಉತ್ತಮ ಶುದ್ಧ ಆಂಡ್ರಾಯಿಡ್ ಫೋನ್ ಬಂದಿದೆ. ಇದು ನಮ್ಮ ಈ ವಾರದ ಗ್ಯಾಜೆಟ್.

### ಗುಣವೈಶಿಷ್ಟ್ಯಗಳು

1.2 ಗಿಗಾಹರ್ಟ್ಸ್ ವೇಗದ ಎರಡು ಹೃದಯಗಳ ಪ್ರೊಸೆಸರ್. ಪ್ರತ್ಯೇಕ ಗ್ರಾಫಿಕ್ಸ್ ಪ್ರೊಸೆಸರ್, 1 + 4 ಗಿಗಾಬೈಟ್ ಮೆಮೊರಿ, ಹೆಚ್ಚಿಗೆ ಮೆಮೊರಿಗೆ ಮೈಕ್ರೊಎಸ್‌ಡಿ ಕಾರ್ಡ್ ಹಾಕುವ ಸೌಲಭ್ಯ, 540 x 960 ಪಿಕ್ಸೆಲ್ ರೆಸೊಲೂಶನ್‌ನ 4.3 ಇಂಚು ಗಾತ್ರದ ಪರದೆ, ಗೊರಿಲ್ಲ ಗಾಜು, 2ಜಿ/3ಜಿ, 2 ಸಿಮ್, 5 ಮೆಗಾಪಿಕ್ಸೆಲ್ ಕ್ಯಾಮೆರಾ, ಇನ್ನೊಂದು ಕ್ಯಾಮೆರಾ ಮತ್ತು ಫ್ಲಾಶ್ ಇಲ್ಲ, ವಿಡಿಯೊ ಚಿತ್ರೀಕರಣ ಸೌಲಭ್ಯ (ಹೈಡೆಫಿನಿಶನ್ ಅಲ್ಲ), ವೈಫೈ, ಬ್ಲೂಟೂತ್, ಜಿಪಿಎಸ್, ಎಫ್‌ಎಂ ರೇಡಿಯೊ, ಆಂಡ್ರಾಯಿಡ್ 4.4.2 (ಕಿಟ್‌ಕ್ಯಾಟ್), 124.8 x 64.8 x 12.3 ಮಿ.ಮೀ. ಗಾತ್ರ, 142 ಗ್ರಾಂ ತೂಕ, 1980 mAh



8:27
ಸರಾಗ ಸಂಗೀತಕ್ಕೆ ಬೋಸ್ ಕ್ಯುಸಿ20
Thu, 06/26/2014 - 01:00 Tweet Pin it
ಆಡಿಯೊ ಉತ್ಪನ್ನಗಳ ಕ್ಷೇತ್ರದಲ್ಲಿ ತನ್ನದೇ ಧ್ವನಿ ಹೊಂದಿದೆ ಬೋಸ್. ಬೋಸ್ ಉತ್ಪನ್ನಗಳನ್ನು ಅದೇ ಮಾದರಿಯ ಇತರೆ ಉತ್ಪನ್ನಗಳಿಗಿಂತ ಸ್ವಲ್ಪ ಪ್ರತ್ಯೇಕವಾಗಿಯೇ ನೋಡಬೇಕು. ಅವುಗಳ ಗುಣಮಟ್ಟವನ್ನು ಆಲಿಸಿಯೇ ಅನುಭವಿಸಬೇಕು. ಬೋಸ್ ಉತ್ಪನ್ನಗಳ ಬಗ್ಗೆ ಪೀಠಿಕಾ ಲೇಖನ ಇದೇ ಅಂಕಣದಲ್ಲಿ ಬಂದಿತ್ತು. ಒಂದು ಬ್ಲೂಟೂತ್ ಸ್ಪೀಕರ್ ಬಗ್ಗೆಯೂ ಲೇಖನ ಬಂದಿತ್ತು. ಈ ಸಲ ಬೋಸ್ ಕ್ವೈಟ್‌ಕಂಫರ್ಟ್ 20/20i ನಾಯ್ಸ್ ಕ್ಯಾನ್ಸೆಲಿಂಗ್ ಇಯರ್‌ಫೋನ್ (QuietComfort 20/20i



ಬ್ಯಾಟರಿ ಇತ್ಯಾದಿ. ಬೆಲೆ □6,999. ಖ್ಯಾತ ಕಂಪೆನಿಯ ಮಧ್ಯಮ ಬೆಲೆಯ, ಅಂದರೆ ಸುಮಾರು □15 ರಿಂದ 20 ಸಾವಿರ ಬೆಲೆಯ ಫೋನ್‌ಗಳ ಗುಣವೈಶಿಷ್ಟ್ಯಗಳು ಇದರಲ್ಲಿವೆ. ಸದ್ಯಕ್ಕೆ ಇದು flipkart.com ಜಾಲತಾಣದ ಮೂಲಕ ಮಾತ್ರ ಲಭ್ಯ.

ಈ ವಿಮರ್ಶೆಯನ್ನು ಇದರ ಬೆಲೆ ಕೇವಲ □6,999 ಎಂಬುದನ್ನು ಗಮನದಲ್ಲಿಟ್ಟುಕೊಂಡು ಬರೆಯಲಾಗಿದೆ. ರಚನೆ ಮತ್ತು ವಿನ್ಯಾಸ ಪರವಾಗಿಲ್ಲ. ಕೈಯಲ್ಲಿ ಹಿಡಿಯುವ ಅನುಭವ ಪರವಾಗಿಲ್ಲ. ಕಡಿಮೆ ಬೆಲೆಯ ಫೋನ್ ಎಂದು ಅನ್ನಿಸುವುದಿಲ್ಲ.

ಕಡಿಮೆ ಬೆಲೆಯ ಫೋನ್ ಆದುದರಿಂದ ಕೆಲಸ ಮಾಡುವ ವೇಗ ಕಡಿಮೆ ಇರಬಹುದು ಎಂದು ಅನ್ನಿಸಿದರೂ ಇದನ್ನು ಬಳಸಿದಾಗ ಹಾಗೆ ಅನ್ನಿಸಲಿಲ್ಲ. ಟೆಂಪಲ್ ರನ್ ಆಟ ಆಡುವ ಅನುಭವ ತೃಪ್ತಿದಾಯಕವಾಗಿಯೇ ಇತ್ತು. ಪರದೆಯಲ್ಲಿ ಐಕಾನ್‌ಗಳನ್ನು ಜಾರಿಸುವಾಗ ನಿಧಾನ ಅನ್ನಿಸಲಿಲ್ಲ. ವಿಡಿಯೊ ವೀಕ್ಷಿಸುವ ಅನುಭವ ಪರವಾಗಿಲ್ಲ. ಹೈಡೆಫಿನಿಶನ್ ವಿಡಿಯೊ ಕೂಡ ಸರಾಗವಾಗಿ ಪ್ಲೇ ಆಗುತ್ತದೆ.

ಇದು ಬಳಸುವುದು ಶುದ್ಧ ಆಂಡ್ರಾಯಿಡ್. ಅಂದರೆ ಇದರ ಮೇಲೆ ಕೆಲವು ಕಂಪೆನಿಗಳವರು ತಮ್ಮದೇ ಹೆಚ್ಚಿಗೆ ತಂತ್ರಾಂಶಗಳನ್ನು ಹೇರುವಂತೆ ಇವರೇನೂ ಹೇರಿಲ್ಲ. ಗೂಗ್ಲ್‌ನವರದೇ ಆಂಡ್ರಾಯಿಡ್ ಇದರಲ್ಲಿರುವುದು. ಇತ್ತೀಚೆಗಿನ ಆವೃತ್ತಿಯಾದ ಕಿಟ್‌ಕ್ಯಾಟ್ (4.4.2) ಇದರಲ್ಲಿರುವುದು. ಬಹುಶಃ ಇದರ ಕೆಲಸ ಮಾಡುವ ವೇಗದಲ್ಲಿ ಏನೂ ಕೊರತೆ ಕಾಣಿಸದಿರುವುದು ಇದೇ ಕಾರಣದಿಂದಿರಬಹುದು.

ಆಡಿಯೊ ಗುಣಮಟ್ಟ ಹೇಳಿಕೊಳ್ಳುವಂತೇನೂ ಇಲ್ಲ. ಹೈಫೈ ಆಡಿಯೊ ಖಂಡಿತ ಅಲ್ಲ. ಬ್ಯಾಟರಿ ಶಕ್ತಿಶಾಲಿಯಾಗಿದೆ. ಎರಡು ಸಿಮ್ ಹಾಕಬಹುದು. ಆದರೆ ಎರಡೂ ಮೈಕ್ರೋಸಿಮ್ ಆಗಿರಬೇಕು. 4ಜಿ ಸಂಪರ್ಕ ಸೌಲಭ್ಯ ಹಾಗೂ ಎನ್‌ಎಫ್‌ಸಿ ಇಲ್ಲ ಎನ್ನುವುದೂ ಕೊರತೆ ಎನಿಸಬಹುದು. ಆದರೆ ಇವುಗಳ ಉಪಯೋಗ ಸದ್ಯಕ್ಕೆ ಭಾರತದಲ್ಲಿ ಅಷ್ಟಕ್ಕಷ್ಟೆ.

ಇದರ ಎರಡು ಪ್ರಮುಖ ಕೊರತೆಗಳೆಂದರೆ ಎದುರುಗಡೆಯ (ಎರಡನೆಯ) ಇನ್ನೊಂದು ಕ್ಯಾಮೆರಾ ಮತ್ತು ಕ್ಯಾಮೆರಾಗೆ ಫ್ಲಾಶ್ ಇಲ್ಲ ಎನ್ನುವುದು. ಇರುವ ಕ್ಯಾಮೆರಾದ ಗುಣಮಟ್ಟವೂ ಹೇಳಿಕೊಳ್ಳುವಂತೇನೂ ಇಲ್ಲ.

ಅಂದರೆ ಉತ್ತಮ ಆಡಿಯೊ ಮತ್ತು ಉತ್ತಮ ಕ್ಯಾಮೆರಾಗಳು ಬೇಕಿದ್ದಲ್ಲಿ ಈ ಫೋನ್ ನಿಮಗಲ್ಲ. ಇದೇ ಅಂಕಣದಲ್ಲಿ ಮೋಟೊ-ಜಿ ಫೋನ್ ಬಗ್ಗೆ ಬರೆದ ಈ ಮಾತುಗಳು ಈ ಫೋನಿಗೂ ಅನ್ವಯವಾಗುತ್ತವೆ - ಇದು ಖಂಡಿತವಾಗಿಯೂ ಒಂದು ಉತ್ತಮ ಬ್ಯುಸಿನೆಸ್ ಬಳಕೆಯ ಫೋನ್ ಹೌದು. ಎಲ್ಲ ಆಂಡ್ರಾಯಿಡ್‌ಗಳಂತೆ ಅಂತರಜಾಲ ವೀಕ್ಷಣೆ, ಇಮೇಲ್, ವಾಟ್ಸ್‌ಆಪ್, ಟ್ವಿಟ್ಟರ್, ಫೇಸ್‌ಬುಕ್, ಉಪಯುಕ್ತ ಆಪ್‌ಗಳು –ಎಲ್ಲ ಬಳಸಹುದು. ಈ ಬೆಲೆಯ ವ್ಯಾಪ್ತಿಯಲ್ಲಿ ಇದಕ್ಕೆ ಸರಿಗಟ್ಟುವ ಗುಣವೈಶಿಷ್ಟ್ಯಗಳನ್ನು ನೀಡುವ ದೊಡ್ಡ ಬ್ರಾಂಡಿನ ಫೋನ್ ಯಾವುದೂ ಇಲ್ಲ. ಕಡಿಮೆ ಬೆಲೆಯ ಮಾರುಕಟ್ಟೆಯಲ್ಲಿ ಇದು ನಿಜಕ್ಕೂ ಉತ್ತಮ ಖರೀದಿ ಎನ್ನಬಹುದು.

ಈ ಫೋನಿನಲ್ಲಿ ಕನ್ನಡದ ತೋರುವಿಕೆ (ರೆಂಡರಿಂಗ್) ಸರಿಯಾಗಿದೆ. ಕನ್ನಡದ ಕೀಲಿಮಣೆ ಹಾಕಿಕೊಂಡರೆ ಎಲ್ಲ ಕಡೆ ಕನ್ನಡದ ಬಳಕೆ ಮಾಡಬಹುದು.

◆

## ತಂತ್ರೋಪನಿಷತ್ತು

### ಕಂಪ್ಯೂಟರ್ ಕೊಳ್ಳುವ ಮುನ್ನ

ಈಗಲೂ ಅಷ್ಟೆ. ಹೊಸ ಕಂಪ್ಯೂಟರ್ ಬೇಕು ಎಂದಾಕ್ಷಣ, ಡೆಸ್ಕ್‌ಟಾಪ್ ಕಂಪ್ಯೂಟರ್ ಕೊಳ್ಳುವುದೋ ಅಥವಾ ಲ್ಯಾಪ್‌ಟಾಪ್ ಖರೀದಿಸುವುದೋ ಎಂಬ ಗೊಂದಲ ಮೂಡುತ್ತದೆ. ಎರಡಕ್ಕೂ ತಗುಲುವ ವೆಚ್ಚ, ಕಂಪೆನಿ, ಬಾಳಿಕೆ ಬಗ್ಗೆ ಸಾಕಷ್ಟು ವಿಮರ್ಶೆ ನಡೆಯುತ್ತದೆ.

ಮನೆಯಲ್ಲಿ ಮಗ/ಮಗಳಿದ್ದರೆ ತನ್ನ ಬಳಕೆಗೆ ಲ್ಯಾಪ್‌ಟಾಪ್ ಬೇಕು ಎನ್ನುತ್ತಾರೆ. ಆದ್ರೆ ಡೆಸ್ಕ್‌ಟಾಪ್ ಇದ್ದರೆ ಮನೆಯಲ್ಲಿ ಎಲ್ಲರೂ ಬಳಸಬಹುದಲ್ಲ ಎನ್ನುವುದು ಅಪ್ಪನ ಯೋಜನೆ. ಹೀಗಿರುವಾಗ ಕಂಪ್ಯೂಟರ್ ಕೊಳ್ಳುತ್ತಿರುವ ಮುಖ್ಯ ಉದ್ದೇಶ ಏನು ಎಂಬುದರ ಮೇಲೆ ಎಲ್ಲವೂ ನಿರ್ಧರಿತವಾಗುತ್ತದೆ. ಸದ್ಯ ಡೆಸ್ಕ್‌ಟಾಪ್ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ಗಿರುವ ವ್ಯತ್ಯಾಸ ಗಮನಿಸೋಣ.

**ಉದ್ದೇಶ:** ಯಾವ ಉದ್ದೇಶಕ್ಕೆ ಕಂಪ್ಯೂಟರ್ ಖರೀದಿಸುತ್ತಿದ್ದೇವೆ ಎನ್ನುವುದು ಮುಖ್ಯ. ಮಕ್ಕಳ ಶಿಕ್ಷಣಕ್ಕೆ ಎಂದಾದರೆ ಅವರ ಅಗತ್ಯಕ್ಕನುಗುಣವಾದ ಲ್ಯಾಪ್‌ಟಾಪ್ ಕೊಳ್ಳುವುದು ಒಳಿತು. ಮನೆಯಲ್ಲಿ ಎಲ್ಲರ ಬಳಕೆಗೆ ಎಂದಾದರೆ ಡೆಸ್ಕ್‌ಟಾಪ್ ಒಳಿತು.

**ಗಾತ್ರ:** ಡೆಸ್ಕ್‌ಟಾಪ್ ಮತ್ತು ಲ್ಯಾಪ್‌ಟಾಪ್ ಖರೀದಿ ವೇಳೆ ಮುಖ್ಯವಾಗಿ ಗಮನಿಸಬೇಕಾದ್ದು ಗಾತ್ರ. ಏಕೆಂದರೆ ಮೌಸ್, ಕೀಬೋರ್ಡ್, ಸಿಪಿಯು, ಮಾನಿಟರ್ ಇವೆಲ್ಲವನ್ನೂ ಹೊತ್ತು ತಿರುಗಲಾಗದು. ಲ್ಯಾಪ್‌ಟಾಪ್ ಆದರೆ ಒಂದು ಬ್ಯಾಗ್‌ನಲ್ಲಿ ಇಟ್ಟುಕೊಂಡು ಓಡಾಡಬಹುದು.

**ನಿರ್ವಹಣೆ:** ಲ್ಯಾಪ್‌ಟಾಪ್ ಬಹಳ ಸೂಕ್ಷ್ಮ ಭಾಗಗಳನ್ನು ಒಳಗೊಂಡಿದೆ. ಹೀಗಾಗಿ ನಾಜೂಕಾಗಿ ನಿರ್ವಹಣೆ ಮಾಡಬೇಕು. ಕೆಲವೊಮ್ಮೆ ಸಣ್ಣ ರಿಪೇರಿಗೂ ದುಬಾರಿ ಬೆಲೆ ತೆರಬೇಕಾಗುತ್ತದೆ. ಆದ್ರೆ ಡೆಸ್ಕ್‌ಟಾಪ್‌ಗೆ ಅಷ್ಟೊಂದು ತಲೆ ಕೆಡಿಸಿಕೊಳ್ಳಬೇಕಿಲ್ಲ.

**ವಿದ್ಯುತ್ ಮೂಲ:** ವಿದ್ಯುತ್ ಇದ್ದರೆ ಮಾತ್ರ ಡೆಸ್ಕ್‌ಟಾಪ್ ಕೆಲಸ ಮಾಡುತ್ತದೆ. ವಿದ್ಯುತ್ ವ್ಯತ್ಯಯ ಉಂಟಾದರೆ ಕಾರ್ಯಾಚರಿಸದು. ಯುಪಿಎಸ್ ಬಳಸಿದರೂ ಅದೂ ದೀರ್ಘ ಅವಧಿಗೆ ಬರುವುದಿಲ್ಲ. ಹೆಚ್ಚುವರಿ ಬ್ಯಾಟರಿ ಕೊಂಡು ಅದರ ಮೂಲಕ ಡೆಸ್ಕ್‌ಟಾಪ್ ನಿರ್ವಹಿಸಬಹುದಾದರೆ ವೆಚ್ಚ ಹೆಚ್ಚುತ್ತದೆ.

ಆದರೆ ಲ್ಯಾಪ್‌ಟಾಪ್ ಹಾಗಿಲ್ಲ. ಬ್ಯಾಟರಿಯಿಂದ ಕೆಲಸ ಮಾಡುತ್ತದೆ. ನಿರ್ದಿಷ್ಟ ಅವಧಿವರೆಗೆ ಬ್ಯಾಟರಿ ಚಾರ್ಜ್ ಮಾಡಿ ಬಳಸಬಹುದು. ಆದರೆ ಚಾರ್ಜ್ ಪೂರ್ತಿ ಮುಗಿದು ಹೋಗುವವರೆಗೆ ಲ್ಯಾಪ್‌ಟಾಪ್ ಬಳಸಿದರೆ ಬ್ಯಾಟರಿ ಬಾಳಿಕೆ ಅವಧಿ ಕಡಿಮೆ ಆಗುತ್ತದೆ.

**ಅಪ್‌ಗ್ರೇಡೇಷನ್:** ಡೆಸ್ಕ್‌ಟಾಪ್ ಅನ್ನು ಸುಲಭದಲ್ಲಿ ಅಪ್‌ಗ್ರೇಡ್ ಮಾಡಬಹುದು. ಗ್ರಾಫಿಕ್ ಕಾರ್ಡ್, ಸೌಂಡ್ ಕಾರ್ಡ್, ಹಾರ್ಡ್ ಡ್ರೈವ್, ಹೆಚ್ಚುವರಿ ರ್‍ಯಾಮ್ ಅಥವಾ ಹಾರ್ಡ್‌ವೇರ್ ಇನ್‌ಸ್ಟಾಲ್ ಮಾಡಲು ಸಾಧ್ಯ.

ಆದರೆ ಲ್ಯಾಪ್‌ಟಾಪ್‌ನಲ್ಲಿ ಈ ರೀತಿ ಅಪ್‌ಗ್ರೇಡೇಷನ್ ಕಷ್ಟಸಾಧ್ಯ. ಇದರಲ್ಲಿರುವ ಇಂಟರ್‌ನಲ್ ಹಾರ್ಡ್‌ವೇರ್ ಅನ್ನು ಸುಲಭವಾಗಿ ತೆಗೆಯಲು ಅಥವಾ ಬದಲಿಸಲು ಸಾಧ್ಯವಿಲ್ಲ. ಡೆಸ್ಕ್‌ಟಾಪ್‌ಗೆ ಹೋಲಿಸಿದರೆ ಲ್ಯಾಪ್‌ಟಾಪ್ ಅಪ್‌ಗ್ರೇಡ್ ಅಥವಾ ರಿಪೇರಿಗೆ ಹೆಚ್ಚು ಹಣ ವ್ಯಯಿಸಬೇಕಾಗುತ್ತದೆ. ಡೆಸ್ಕ್‌ಟಾಪ್ ಮತ್ತು ಕಂಪ್ಯೂಟರ್ ಎರಡೂ ಕಂಪೆನಿ, ಕಾನ್ಫಿಗರೇಷನ್ ಆಧಾರದ ಮೇಲೆ ವಿವಿಧ ಬೆಲೆಯಲ್ಲಿ ಲಭ್ಯ.

– **ವಿ.ಎಸ್.ಶರ್ಮಾ**

## ವಾರದ ಆಪ್ (app)

### ಎಂಪಿ3 ಕಟ್ಟರ್ ಮತ್ತು ರಿಂಗ್‌ಟೋನ್ ಮೇಕರ್




ನಿಮ್ಮ ಫೋನಿನಲ್ಲಿರುವ ರಿಂಗ್‌ಟೋನ್‌ಗಳು ನಿಮಗಿಷ್ಟವಾಗಿಲ್ಲವೇ? ನಿಮ್ಮ ಫೋನಿನಲ್ಲೇ ಹಲವು ಎಂಪಿ3 ಹಾಡುಗಳ ಸಂಗ್ರಹ ಇದೆ ತಾನೆ? ಅದರಲ್ಲೇ ಒಂದು ಹಾಡಿನ ಭಾಗವೊಂದನ್ನು ರಿಂಗ್‌ಟೋನ್ ಮಾಡಿದರೆ ಚೆನ್ನಾಗಿರುತ್ತದಲ್ಲವೇ? ಇದಕ್ಕಾಗಿ ಹಲವು ಕಿರುತಂತ್ರಾಂಶಗಳು (ಆಪ್) ಲಭ್ಯವಿವೆ. ಅಂತಹ ಒಂದು ಕಿರುತಂತ್ರಾಂಶ ಎಂಪಿ3 ಕಟ್ಟರ್ ಮತ್ತು ರಿಂಗ್‌ಟೋನ್ ಮೇಕರ್ (MP3 Cutter and Ringtone Maker) . ಇದು ನೀವು ಈಗಾಗಲೇ ಊಹಿಸಿದಂತೆ ಆಂಡ್ರಾಯಿಡ್‌ನಲ್ಲಿ ಕೆಲಸ ಮಾಡುತ್ತದೆ. ಇದನ್ನು ಬಳಸಿ ನಿಮ್ಮ ಫೋನಿನಲ್ಲಿ ಇರುವ ಎಂಪಿ3 ಹಾಡೊಂದನ್ನು ನಿಮಗೆ ಬೇಕಾದಲ್ಲಿ ಕತ್ತರಿಸಿ ರಿಂಗ್‌ಟೋನ್ ಮಾಡಬಹುದು. ನಿಮ್ಮ ಫೋನನ್ನು ಬಳಸಿ ಧ್ವನಿಯೊಂದನ್ನು ರೆಕಾರ್ಡ್ ಮಾಡಿಕೊಂಡು ಅದನ್ನೇ ರಿಂಗ್‌ಟೋನ್ ಆಗಿ ಆಯ್ಕೆ ಮಾಡಿಕೊಳ್ಳುವ ಸವಲತ್ತೂ ಇದೆ.

## ಗ್ಯಾಜೆಟ್ ಸುದ್ದಿ

### ಏರ್‌ಸೆಲ್ ಬಳಸುವವರಿಗೆ ಉಚಿತ ವಿಕಿಪೀಡಿಯ




ಮೊಬೈಲ್ ಫೋನ್ ಸೇವೆ ನೀಡುವ ಏರ್‌ಸೆಲ್ ಕಂಪೆನಿ ಮತ್ತು ವಿಕಿಪೀಡಿಯವನ್ನು ನಡೆಸುವ ವಿಕಿಮೀಡಿಯ ಫೌಂಡೇಶನ್ ಜೊತೆಗೂಡಿದ್ದಾರೆ. ಏರ್‌ಸೆಲ್ ಗ್ರಾಹಕರು ತಮ್ಮ ಸ್ಮಾರ್ಟ್‌ಫೋನ್‌ಗಳಲ್ಲಿ ವಿಕಿಪೀಡಿಯವನ್ನು ಬಳಸಿದರೆ ಅವರು ಅಂತರಜಾಲ ಬಳಕೆಗೆ ಹಣ ನೀಡಬೇಕಾಗಿರುವುದಿಲ್ಲ. ಇದು ವಿಕಿಪೀಡಿಯ ಬಳಸುವವರಿಗೆ ಒಳ್ಳೆಯ ಸುದ್ದಿ. ವಿಕಿಪೀಡಿಯ ಝೀರೊ ಎಂಬುದು ಆಫ್ರಿಕದಲ್ಲಿ ಪ್ರಾರಂಭವಾದ ಯೋಜನೆ. ಇದರ ಪ್ರಕಾರ ಮೊಬೈಲ್ ಸೇವೆ ನೀಡುವ ಕಂಪೆನಿ ತಮ್ಮ ಗ್ರಾಹಕರು ವಿಕಿಪೀಡಿಯ ವೀಕ್ಷಿಸಿದರೆ ಮಾಹಿತಿ ಪ್ರವಾಹಕ್ಕೆ (ಡಾಟಾ) ಹಣ ನೀಡಬೇಕಾಗಿರುವುದಿಲ್ಲ. ಭಾರತದಲ್ಲಿ ಈ ವಿಕಿಪೀಡಿಯ ಝೀರೊ ಯೋಜನೆಯಲ್ಲಿ ಸದ್ಯಕ್ಕೆ ಏರ್‌ಸೆಲ್ ಮಾತ್ರ ಭಾಗಿಯಾಗಿದೆ. ಇಂಗ್ಲಿಷ್ ಮಾತ್ರವಲ್ಲದೆ ಇತರೆ ಭಾರತೀಯ ಭಾಷೆಗಳಲ್ಲಿ ವಿಕಿಪೀಡಿಯ ಬಳಸುವವರಿಗೆ ಇದು ಒಳ್ಳೆಯ ಸುದ್ದಿ.

## ಗ್ಯಾಜೆಟ್ ತರ್ಲೆ

ಪ್ರತಿಯೊಬ್ಬ ಅಪಯಶಸ್ವಿ ವ್ಯಕ್ತಿಯ ಹಿಂದೆ ಫೇಸ್‌ಬುಕ್, ಟ್ವಿಟ್ಟರ್ ಮತ್ತು ವಾಟ್ಸ್‌ಆಪ್‌ಗಳಿರುತ್ತವೆ. ಪ್ರತಿಯೊಬ್ಬ ಯಶಸ್ವಿ ವ್ಯಕ್ತಿಯ ಹಿಂದೆ ಒಂದು ಅಳಿಸಲ್ಪಟ್ಟ ಫೇಸ್‌ಬುಕ್ ಖಾತೆ ಇರುತ್ತದೆ.

## ಗ್ಯಾಜೆಟ್ ಸಲಹೆ

**ಬಾಲಕೃಷ್ಣ ವಿ ಉಪಾಧ್ಯ ಅವರ ಪ್ರಶ್ನೆ:** ನಾನು ಸ್ಯಾಮಸಂಗ್ ಆಂಡ್ರಾಯಿಡ್ ಮೊಬೈಲ್ ಉಪಯೋಗಿಸುತ್ತಿದ್ದೇನೆ. ಅದರಲ್ಲಿ ಕನ್ನಡ ಬರೆಯುವುದು ನನಗೆ ತುಂಬಾ ಅವಶ್ಯವಾಗಿತ್ತು. ನೀವು ದಿನಾಂಕ 19-06-2014 ರ ಸಂಚಿಕೆಯಲ್ಲಿ ನೀಡಿರುವ ಮಾಹಿತಿ ತುಂಬಾ ಉಪಯುಕ್ತವಾಗಿತ್ತು. ಅದೇ ರೀತಿ ಈಗ ನಾನು ಕನ್ನಡದಲ್ಲಿ ಬರೆಯುವುದನ್ನು ಕಲಿತಿದ್ದೇನೆ. ಆದರೆ ಈಗ ನನಗೆ ಎಂಎಸ್ ಆಫೀಸಿನ ಅವಶ್ಯಕತೆ ಇದೆ. ಅದನ್ನು ನಾನು ನನ್ನ ಆಂಡ್ರಾಯಿಡ್‌ನಲ್ಲಿ ಉಪಯೋಗಿಸಬಹುದಾ ? ಉಪಯೋಗಿಸಬಹುದಾದಲ್ಲಿ ಅದನ್ನು ಹೇಗೆ ಡೌನ್‌ಲೋಡ್ ಮಾಡಿಕೊಳ್ಳಬೇಕು ? ಹಾಗೂ ಅದನ್ನು ಹೇಗೆ ಉಪಯೋಗಿಸಬೇಕು?

**ಉ:** ನೀವು ಮಾರ್ಚ್ 13, 2014 ದಿನಾಂಕದ ಗ್ಯಾಜೆಟ್‌ಲೋಕ ಅಂಕಣದಲ್ಲಿ ಪರಿಚಯಿಸಿದ ಕಿಂಗ್‌ಸಾಫ್ಟ್ ಆಫೀಸ್ (Kingsoft Office) ಬಳಸಬಹುದು.